ಕೂಡಿಸಿಕೊಂಡು ಊಟ ಕೊಡಿಸಿದ. ಅವರೆಲ್ಲರ ಜೊತೆ ಕುಳಿತು ಊಟ ಮಾಡುತ್ತಾ, ಸುತ್ತಲೂ ಕದಲದೇ ನಿಂತಿದ್ದ ಹಳ್ಳಿಯವರ ಕಡೆ ನೋಡುತ್ತಾ ಹೆಮ್ಮೆಯಿಂದ ಬೀಗಿದ್ದ. ದಿನಾ ಒಂದೇ ಬಗೆಯ ಅನ್ನ, ಸಾಂಬಾರು, ಚಪಾತಿ, ವಡೆ, ಮೊಸರನ್ನವನ್ನು, ಶೂಟಿಂಗ್ ತಂಡದವರು 'ತಿನ್ನಬೇಕಲ್ಲಾ...' ಎಂದು ತಿನ್ನುತ್ತಿದ್ದರೆ, ಶಿವುಗೆ ಅದು ಮೃಷ್ಟಾನ್ನ ಭೋಜನವಾಗಿತ್ತು. ಮತ್ತೆ ಮತ್ತೆ ಹಾಕಿಸಿಕೊಂಡ ತಿಂದ.

ಊಟದ ನಂತರ ಮತ್ತೊಂದು ಸುತ್ತು ಕುಲುಮೆಯ ದೃಶ್ಯದ ಶೂಟಿಂಗ್ ಮುಂದುವರೆಯಿತು. ನಾಲ್ಕು ಗಂಟೆಯ ಹೊತ್ತಿಗೆ ಒಮ್ಮೆ ಚಹಾ, ಬಿಸ್ಕತ್ತು ಬಂದಾಗಲೂ ಈಗ ಒಂದು ಸ್ಟೂಲಿನ ಮೇಲೆ ಕೂರಿಸಲಾಗಿದ್ದ ಶಿವುಗೂ ಕೊಡಲಾಗಿತ್ತು. ಶಿವು ಈ ರಾಜಾತಿಥ್ಯದಿಂದ ಉಬ್ಬಿ ಹೋಗಿದ್ದ. ಸುತ್ತಲೂ ನೆರೆದಿದ್ದ ಜನ ಸರದಿಯ ಮೇಲೆ ಎನ್ನುವ ಹಾಗೆ ತಮ್ಮ ತಮ್ಮ ಮನೆಗಳಿಗೆ ಹೋಗಿ ಊಟ ಮಾಡಿ ಮತ್ತೆ ಬಂದು ಸೇರಿದ್ದರು.

ಅವತ್ತಿನ ಶೂಟಿಂಗ್ ಪ್ಯಾಕ್‌ಅಪ್ ಆದಾಗ ಆಗಲೇ ಸಂಜೆ ಆರೂವರೆಯಾಗಿತ್ತು. ಒಮ್ಮೆ ಪ್ಯಾಕ್‌ಅಪ್ ಆದಕೂಡಲೇ ಶೂಟಿಂಗಿನ ಬೇರೆ ಬೇರೆ ತಂಡಗಳು ಹೆಚ್ಚು ಸಕ್ರಿಯರಾಗಿ ಬಿಡುತ್ತಾರೆ. ತಮ್ಮ ತಮ್ಮ ಸಾಮಾನು, ಸಲಕರಣೆ ಜೋಡಿಸಿಕೊಂಡು ಆದಷ್ಟು ಬೇಗ ಅಲ್ಲಿಂದ ಹೊರಟುಹೋಗುವುದರಲ್ಲಿ ಬಿಝಿಯಾಗಿ ಬಿಡುತ್ತಾರೆ.

ಚಂದ್ರುವೂ ತನ್ನ ಪಾಲಿನ ಕೆಲಸವನ್ನು ಮುಗಿಸಿ ತನಗೆ ನಿಗದಿಯಾಗಿದ್ದ ವ್ಯಾನಿನತ್ತ ಹೆಜ್ಜೆ ಹಾಕುತ್ತಿರುವ ಆತನಿಗೆ ಇದ್ದಕ್ಕಿದ್ದ ಹಾಗೆ ಶಿವು ನೆನಪಾಯಿತು. ಮುಂದೇನು ಎಂದು ಹೊಳೆಯದೇ ಕಂಗಾಲಾಗಿ ಕುಳಿತಿದ್ದ ಶಿವುಗೆ ಚಂದ್ರುವನ್ನು ನೋಡಿ ಸ್ವಲ್ಪ ಜೀವಬಂದಿತ್ತು. 'ಇದೇ ಸೀನ್ ನಾಳೆ ಕೂಡ ಕಂಟಿನ್ಯೂ ಆಗುತ್ತೆ, ಶಿವು' ಎಂದದ್ದಕ್ಕೆ 'ಅರ್ಥವಾಯಿತು' ಎನ್ನುವಂತೆ ಶಿವು ತಲೆಯಾಡಿಸಿದ. ಚಂದ್ರು ಒಮ್ಮೆ ಅವನು ಹಾಕಿದ್ದ ಹೊಸ ಶರ್ಟನ್ನೊಮ್ಮೆ ನೊಡಿದ. 'ನೀನು ಇವತ್ತು ಇದನ್ನು ಹಾಕಿಕೊಂಡೇ ಮನೆಗೆ ಹೋಗು' ಎಂದಿದ್ದಕ್ಕೆ ಶಿವುಗೆ ಏನು ಹೇಳಬೇಕು ಎಂದು ಗೊತ್ತಾಗಲಿಲ್ಲ. ಅಪ್ಪ... ನಿಂಗಪ್ಪನ ನೆನಪಾಯಿತು. ಹೊಸ ಅಂಗಿ ನೋಡಿ ಆತ ಖುಶಿ ಪಡುವನೋ, ಅಥವಾ ತನ್ನ ಹಳೇ ಹರಿದ ಅಂಗಿ ಇಲ್ಲದಿದ್ದಕ್ಕೆ ಬಯ್ಯುತ್ತಾನೋ...

ಅಷ್ಟರಲ್ಲಿ ಚಂದ್ರು ತನ್ನ ವ್ಯಾನಿನವರು ಅವಸರ ಮಾಡಿದ್ದಕ್ಕೆ ತನ್ನ ಬ್ಯಾಗನ್ನು ಹೆಗಲಿಗೆ ಏರಿಸುತ್ತಾ ಅಲ್ಲಿಂದ ಹೋಗಿಯೇ ಬಿಟ್ಟಿದ್ದ. ಆಗಲೇ ಆಗಿದ್ದು ಆಗಬಾರದ ಅನಾಹುತ. ತನ್ನ ಕೆಲಸವನ್ನು ಬೇಗ ಮುಗಿಸಲು ನೋಡುತ್ತಿದ್ದ ಕಾಸ್ಟ್ಯೂಮ್ ಅಸಿಸ್ಟೆಂಟ್. ಅಷ್ಟರಲ್ಲಿ ಡೈರೆಕ್ಟರ್‌ನ ಅಸಿಸ್ಟೆಂಟ್ ಶಿವು ಬಳಿಗೆ ಅವಸರವಾಗಿ ಬಂದ, ಹೇಳದೇ ಕೇಳದೇ ಅವಸರವಾಗಿ ಶಿವು ಅಂಗಿಯನ್ನು ಬಿಚ್ಚ ತೊಡಗಿದ. ಪ್ಯಾಕ್‌ಅಪ್ ಆದ ನಂತರ ಕಾಸ್ಟ್ಯೂಮಿನ ಪ್ರಾಪರ್ಟಿಯನ್ನೆಲ್ಲಾ ಸಂಗ್ರಹಿಸಿಕೊಂಡು ಟ್ರಂಕುಗಳಲ್ಲಿ ಹಾಕುವುದು ಅವನ ಡ್ಯೂಟಿಯಾಗಿತ್ತು. ಅವನು ಅದನ್ನು ಶಿರಸಾ ಪಾಲಿಸುತ್ತಿದ್ದ. ಅಂಗಿ ಬಿಚ್ಚಿ ಅರಬತ್ತಲೆಯಾಗಿದ್ದ ಶಿವು ತೊದಲುತ್ತಾ, 'ನನ್ನ ಅಂಗಿ?' ಎಂದ. ಅದಕ್ಕೆ ಆ ಅಸಿಸ್ಟೆಂಟ್, ನಿನಗೇನು ಗೊತ್ತಾಗಲ್ಲವೇ ಎಂಬ ದಾಟಿಯಲ್ಲಿ, 'ಅದು ಕಂಟಿನ್ಯುಯಿಟಿ, ನಾಳೇನೂ ಶೂಟಿಂಗಿಗೆ ಬೇಕು.' ಎನ್ನುತ್ತಲೇ ಹೊರಟೇ ಹೋಗಿದ್ದ. ಸಂಜೆಗತ್ತಲು ಅವತ್ತು ಹೆಚ್ಚು ವೇಗವಾಗಿ ಕವಿಯುತ್ತಿರುವ ಹಾಗೆ ಅನ್ನಿಸಿತು ಅರೆಬತ್ತಲೆ ನಿಂತ ಶಿವುಗೆ. ಸೇರಿದ್ದ ಜನರೆಲ್ಲಾ ಇವತ್ತಿನ ಪುಕ್ಕಟೆ ರಂಜನೆ ಮುಗಿಯಿತು ಎನ್ನುವ ಹಾಗೆ ತಮ್ಮ ತಮ್ಮ ಮನೆಗೆ ಹೊರಟು ಹೋದರು. ತನ್ನ ಕುಲುಮೆಯ ಸುತ್ತ ಕಂಟಿನ್ಯುಯಿಟಿ ಕಾಪಾಡಬೇಕು ಎನ್ನುವ ಹೆಸರಿನಲ್ಲಿ ಹಗ್ಗ ಕಟ್ಟಿದ್ದರಿಂದ ಜಲೀಲನೂ ತನ್ನ ಕುಲುಮೆಯಲ್ಲಿ ಪ್ರವೇಶಿಸಲಾಗದೇ ಹತ್ತಿರದ ಮಸೀದಿಗೆ ನಮಾಜಿಗೆ ಹೋದ

ಶಿವು...?

ಶಾಲೆಯ ಹಿಂಬದಿಯ ತೋಪಿನಲ್ಲಿದ್ದ ಒಂದು ದೊಡ್ಡ ಬಂಡೆಗೆ ಆತುಕೊಂಡು ಕೂತಿದ್ದ. ಆಗಲೇ ಮಧ್ಯರಾತ್ರಿ ಕಳೆದಿತ್ತು. ಹಾಗೇ ನಿದ್ದೆಗೆ ಜಾರುವ ಮುನ್ನ, ಅವತ್ತಿಗೆ ಕೊನೆಯ ಸಲ ಎನ್ನುವ ಹಾಗೆ, 'ನಾನು ಅಲ್ಲಿಗೆ ಹೋಗಲೇ ಬಾರದಾಗಿತ್ತು' ಎಂದು ಮನಸ್ಸಿನಲ್ಲಿ ಅಂದುಕೊಂಡು ಕಣ್ಣೀರು ಹಾಕಿದ.

ಮದನ್‌ರಾಜ್ ಅವರಿಗೆ ಮರುದಿನ ಇನ್ನೊಂದು ಸಿನಿಮಾದ ಶೂಟಿಂಗ್ ಬಾಕಿ ಇದ್ದುದರಿಂದ ಈ ಕುಲುಮೆ ಕರೀಮ್ ಸಾಬನ ದೃಶ್ಯವನ್ನು ಮುಂದಿನ ವಾರ ಮಾಡಿದರಾಯಿತು ಎಂದು ಅವರೂ ಮತ್ತು ನಿರ್ದೇಶಕ ರವಿರಾಜ್ ಸಂಜೆ ಮಾತಾಡಿಕೊಂಡಿದ್ದು ಶಿವುಗೆ ಗೊತ್ತಾಗಲೇ ಇಲ್ಲ!

●